† ಶ್ರೀ ಕೆ. ಎಚ್. ರಂಗನಾಥ್.—ನ್ಯಾಷನಲೈಸ್ ಬ್ಯಾಂಕುಗಳಿಂದ ಡಿಫೆರೆನ್ಷ್ಯಲ್ ರೇಟ್ ಆಫ್ ಇಂಟರೆಸ್ಟ್ ಮೇಲೆ ಸಾಲ ಕೊಡಿಸತಕ್ಕಂಥ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ಮುಖ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಪ್ರಚುರಪಡಿಸಿದ್ದಾರೆ. ಇನ್ನು ತುಮಕೂರು ಜಿಲ್ಲಾ ಬ್ಯಾಂಕು ಈಗ ನಬೆ ಡಿಯರಿ ರೂಲ್ಸ್ ಮಾಡಿ ಚಿನ್ನ ಮತ್ತು ಬೆಳ್ಳಿ ಅಡವಿಟ್ಟು ಕೊಂಡು ಏನು ಸಾಲಗಳನ್ನು ತೆಗೆದುಕೊಂಡಿದ್ದಾರೋ ಅಂಥವರಿಗೆ ಮತ್ತು ಆಗ್ರಿಕಲ್ಚರಲ್ ಲೇಬರರ್ಸ್ ಅವರಿಗೆ ಷಾರ್ಟ್ ಟರ್ಮ್ ಲೋನ್ ಕೊಡತಕ್ಕಂಥ ಯೋಜನೆ ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಹರಳಕಟ್ಟೆ ಮತ್ತು ಹೊನ್ನಾವಳಿಗಳಲ್ಲಿ ಒಂದು ನೂರು ರೂಪಾಯಿ ಹಣವನ್ನು ಸಾಲವಾಗಿ ಕೊಡತಕ್ಕಂಥ ವ್ಯವಸ್ಥೆ ಮಾಡಿದಾರೆ.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತಿಪಟೂರಿನಲ್ಲಿ ಪ್ಯಾಪರ್ ಮತ್ತು ಹಳ್ಳಿಗಳಿಂದ ಬಂದಿರತಕ್ಕ ಜನ ಹಣ ಸಿಕ್ಕದೆ ಒದ್ದಾಡುತ್ತಿದ್ದಾರೆ. ತಾವು ಹೇಳುತ್ತೀರಿ ನ್ಯಾಷನಲೈಸ್ಡ್ ಬ್ಯಾಂಕಿಂದ ಹಣ ಕೊಡಿಸುತ್ತೇವೆಂದು.

ಶ್ರೀ ಕೆ. ಎಚ್. ರಂಗನಾಥ್.—ನ್ಯಾಷನಲೈಸ್ಡ್ ಬ್ಯಾಂಕುಗಳ ಮುಖಾಂತರ ಡಿಫೆರೆನ್ಷಿಯಲ್ ರೇಟ್ ಆಫ್ ಇಂಟರೆಸ್ಟ್ ಮುಖಾಂತರ ಕೊಡಿಸುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಈಗಾಗಲೇ ಕೊಡಿಸಿದ್ದೇವೆಂದು ಹೇಳಲಿಲ.

ಶ್ರೀ ಟಿ, ಎಂ. ಮಂಜುನಾಥ್,—ನಮ್ಮ ಪರನನರ್ ಜವಾಬ್ದಾರಿಯ ಮೇಲೆ ಋಣ ಪರಿಹಾರ ಸಾಲ ಕೊಡಿ ಎಂದು ಕೇಳಿದರೆ, ಆ ಬ್ಯಾಂಕುಗಳ ಮ್ಯಾನೇಜರ್‌ರವರು ಕೊಡುವ ಹಕ್ಕು ನಮಗೆ ಇದೆ. ನೀವು ಹೇಳಿದಂತೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತಾರೆ. ಸೆಕ್ಯೂರಿಟಿ ಕೊಟ್ಟವರಿಗೆ ಸಾಲ ಕೊಡುತ್ತೇವೆಂದು ಹೇಳುತಾರೆ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಆಗಲೇ ಜನರಿಗೆ ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಸಾಲಗಳನ್ನು ಕೊಡಿಸಿದ್ದೇವೆಂದು ಹೇಳಲಿಲ್ಲ. ಸರ್ಕಾರ ಇವರ ಬಗ್ಗೆ ಆಲೋಚನೆ ಮಾಡುತಾ ಇದೆ ಎನ್ನುವ ಮಾತನ್ನು ಮಾತ್ರ ಹೇಳಿದೆ.

ಶ್ರೀ ಟಿ. ಎಂ. ಮಂಜುನಾಥ್.—ನ್ಯಾಷನಲೈನ್ಡ್ ಬ್ಯಾಂಕು ಮತ್ತು ಜಿಲ್ಲಾ ಕೋ ಆಪ್ ರೇಟೀವ್ ಬ್ಯಾಂಕುಗಳನ್ನು ಬಿಟ್ಟು ಬಿಟ್ಟರೆ ಇನ್ನು ಉಳಿದ ಖಾಸಗಿ ಜನರು ಯಾರಾದರೂ ಬ್ಯಾಂಕಿನ ರೇಟಿನಲ್ಲಿ ಸಾಲ ಕೊಡುವುದಕ್ಕೆ ಮುಂದೆ ಬಂದರೆ ಅದಕ್ಕೆ ನಿಮ್ಮ ಕಾನೂನಿಂದ ಯಾವ ರೀತಿಯಿಂದಲೂ ತೊಂದರೆ ಮಾಡಬಾರದು. ಆ ರೀತಿ ಮಾಡಲು ಸಾಧ್ಯವೇ ?

ಶ್ರೀ ಕೆ. ಎಚ್. ರಂಗನಾಥ್.—ಆ ರೀತಿ ಖಾಸಗಿ ಜನರಿಂದ ಸಾಲವನ್ನು ಈ ಬಡವರಿಗೆ ಕೊಡಿಸುವ ವಿಚಾರ ಸರ್ಕಾರಕ್ಕೆ ಇದ್ದರೆ ಈ ಕಾನೂನನ್ನು ತರುವ ಪ್ರಸಂಗವೇ ಬರುವುದಿಲ್ಲ.

ಶಿರಗುಪ್ಪದ ಖಿಂಡಸಾರಿ ಕಾರ್ಖಾನೆ

೨೩೬. ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).—ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಶಿರಗುಪ್ಪ ಪುರನಿವಾಸಿಗಳಿಂದಲೂ ಹಾಗೂ ಶಾಸಕರಿಂದಲೂ ಶಿರಗುಪ್ಪದಲ್ಲಿರುವ ಖಾಸಗೀ ಖಿಂಡಸಾರಿ ಕಾರ್ಖಾನೆಗೆ ಆರೋಗ್ಯ ದೃಷ್ಟಿಯಿಂದಲೂ ಪ್ರಯಾಣದ ಅನುಕೂಲತೆಗೆ ಅಡಚಣೆ ಉಂಟಾಗುವುದೆಂಬ ದೃಷ್ಟಿಯಿಂದ ಲೈಸನ್ಸ್‌ನ್ನು ಕೊಡಬಾರದೆಂಬ ಬೇಡಿಕೆಯ ಪತ್ರವು ಸರಕಾರದವರಿಗೆ ಬಂದಿದೆಯೇ ;

(ಆ) ಈ ವಿಷಯದಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿಗಳನ್ನು ಪರಿಶೀಲಿಸಿ ಲೈಸನ್ಸು ಕೊಡಬಾರದೆಂಬ ವಿಷಯವನ್ನು ಸರಕಾರದವರಿಗೆ ಕಳುಹಿಸಿರುವುದು ನಿಜವೇ ;

(ಇ) ಇಬ್ಬರು ಮೇಲ್ಕಂಡ ಅಧಿಕಾರಿಗಳು ಲೈಸನ್ಸ್ ಕೊಡಬಾರದೆಂದು ಅಭಿಪ್ರಾಯ ತಿಳಿಸಿದಾಗ್ಯೂ ಅದರ ಮಾಲೀಕನು ಲೈಸನ್ಸ್ ಪಡೆದುದಕ್ಕೆ ಕಾರಣಗಳೇನು ;

(ಈ) ಹಿಂದೆ ಸರಕಾರವು ಸಿರುಗುಪ್ಪಕ್ಕೆ ೨ ಮೈಲಿ ದೂರದಲ್ಲಿ ನಿರ್ಮಾಣವಾಗಿರುವ ದಿನಕ್ಕೆ ೧೫೦೦೦ ಟನ್‌ಗಳಷ್ಟು ಕಬ್ಬು ಅರಿಯುವ ಸಕ್ಕರೆ ಕಾರ್ಖಾನೆಗೆ ಸರಕಾರವು ಲೈಸನ್ಸ್‌ನ್ನು ನೀಡಿದ್ದಾಗ್ಯೂ ಸದರಿ ಖಂಡಸಾರಿ ಕಾರ್ಖಾನೆಗೆ ಲೈಸನ್ಸನ್ನು ನೀಡುವ ಔಚಿತ್ಯವೇನು ?

ಶ್ರೀ ಎಂ. ವೀರಪ್ಪ ಮೋಯಿಲಿ(ಸಣ್ಣ ಪ್ರಮಾಣದ ಕೈಗಾರಿಕಾ).—ಶಾಖೆಯ ರಾಜ್ಯ ಮಂತ್ರಿಗಳು.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಪರವಾಗಿ) :

(ಅ) ಹೌದು.

(ಆ) ಹೌದು.

(ಇ) ಸ್ಥಳೀಯ ಜನರಿಂದ ಹಾಗೂ ಸ್ಥಳೀಯ ಶಾಸಕರಿಂದ ಬಂದ ಮನವಿ ಪತ್ರಗಳನ್ನು ಆರೋಗ್ಯಾಧಿಕಾರಿಗಳಿಗೆ ಹಾಗೂ ಕರ್ನಾಟಕ ರಾಜ್ಯ ನೀರು ಮಲೀನತೆ-ಹಾಗೂ ಅಶುದ್ಧತೆ ತಡೆಯುವ ಹಾಗೂ ನಿಲ್ಲಿಸುವ ಸಲುವಾಗಿ ರಚಿತವಾದ ಮಂಡಳಿಯ ವಿಚಾರಣೆಗಾಗಿ ರವಾನಿಸಲಾಗಿತ್ತು. ಈ ಮೇಲ್ಕಂಡ ಸ್ಥಳಗಳಿಂದ ವರದಿ ಬರುವವರೆಗೆ ಲೈಸನ್ಸ್‌ನ್ನು ಮುಂದುವರಿಸಲಾಗಿತ್ತು. ಈ ಮೇಲ್ಕಂಡ ಖಂಡಸಾರಿ ಕಾರ್ಖಾನೆಯು ಜನರ ಆರೋಗ್ಯಕ್ಕೆ ಧಕ್ಕೆದಾಯಕವಾಗಿದೆ ಎಂದು ಮೇಲ್ಕಂಡ ಮಂಡಳಿಯಿಂದ ವರದಿ ಬರುತ್ತಲೇ ಈ ಖಂಡಸಾರ ಕಾರ್ಖಾನೆಯ ಲೈಸನ್ಸನ್ನು ಕಾರ್ಖಾನೆಯು ಮಂಡಳಿಯ ಒಪ್ಪಿಗೆ ಪಡೆಯುವ ತನಕ ರದ್ದುಪಡಿಸಲಾಗಿದೆ.

(ಈ) ಈ ಖಂಡಸಾರಿ ಸಕ್ಕರೆ ಕಾರ್ಖಾನೆಯು ಹಳೆಯದಾಗಿದ್ದು ಸಕ್ಕರೆ ಕಾರ್ಖಾನೆಯು ೧೯೭೩ರಲ್ಲಿ ಸ್ಥಾಪಿತವಾಗುವುದಕ್ಕಿಂತಲೂ ಮೊದಲೇ ೧೯೫೯ರಿಂದ ಈಗಿರುವ ಸ್ಥಳದಲ್ಲಿ ಅಸ್ತಿತ್ವದಲ್ಲಿದೆ. ಪರಿಸ್ಥಿತಿ ಈ ರೀತಿ ಇರುವಾಗ ಯಾವಬಲವಾದ ಹಾಗೂ ಆಧಾರವುಳ್ಳ ಕಾರಣವಿಲ್ಲದೆ ಲೈಸನ್ಸನ್ನು ಮುಂದುವರಿಸುವುದನ್ನು ನಿರಾಕರಿಸಲು ಬರುವ ಹಾಗಿರಲಿಲ್ಲ ; ಈ ಮೇಲೆ ಹೇಳಿದ ಪ್ರಕಾರ ಕರ್ನಾಟಕ ರಾಜ್ಯ ನೀರು ಮಲೀನತೆ ಹಾಗೂ ಅಶುದ್ಧತೆ ತಡೆಯುವ ಹಾಗೂ ನಿಲ್ಲಿಸುವ ಸಲುವಾಗಿ ರಚಿತವಾದ ಮಂಡಳಿಯು ವರದಿ ಬರುತ್ತಲೇ ಸರಕಾರವು ಈ ಖಂಡಸಾರಿ ಸಕ್ಕರೆ ಕಾರ್ಖಾನೆಯ ಲೈಸನ್ಸನ್ನು ರದ್ದುಪಡಿಸಿದೆ.

ಶ್ರೀ ಬಿ. ಇ. ರಾಮಯ್ಯ.—ತಾವು ಅಲ್ಲಿಯ ಪುರನಿವಾಸಿಗಳಿಂದಲೂ ಹಾಗೂ ಶಾಸಕರಿಂದಲೂ ಅರ್ಜಿ ಬಂದಿದೆಯೆಂದು ಹೇಳಿದ್ದಿರಿ ? ಅದು ಬಂದಮೇಲೂ ಕೂಡ ಆ ಫ್ಯಾಕ್ಟರಿ ಅಧಿಕಾರಿಗಳು ತಮ್ಮ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎಂ. ವೀರಪ್ಪ ಮೋಯಿಲಿ.— ಆ ಖಂಡಸಾರಿ ಕಾರ್ಖಾನೆ ಸ್ಥಾಪನೆಯಾದುದು ೧೯೫೯ನೇ ಇಸವಿಯಲಿ. ಶುಗರ್ ಫ್ಯಾಕ್ಟರಿ ಸ್ಥಾಪನೆಯಾದುದು ೧೯೭೩ರಲ್ಲಿ. ಆದಕ್ಕೂ ಮೊದಲು ಇದು ಸ್ಥಾಪಿತವಾದದ್ದು. ಆದ್ದರಿಂದ ಅರ್ಜಿ ಬಂದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ತಾವು ಕ್ರಮ ತೆಗೆದುಕೊಂಡು ಸಸ್‌ಪೆಂಡ್ ಮಾಡಿದ ಮೇಲೂ ಅದು ತನ್ನ ಕಾರ್ಯವನ್ನು ನಡೆಸುತ್ತಿದೆ. ಮತ್ತು ಯಾವಾಗ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಿರಿ ?

ಶ್ರೀ ಎಂ. ವೀರಪ್ಪ ಮೋಯಿಲಿ.—ನಾವು ಫೆಬ್ರುವರಿ ಮೊದಲನೇ ವಾರದಲ್ಲಿ ೧೯೭೬ನೇ ಇಸವಿಯಲ್ಲಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಲೈಸೆನ್ಸ್ ರದ್ದು ಮಾಡಿದ್ದರೂ ಫ್ಯಾಕ್ಟರಿ ನಡೆಯುತ್ತಾ ಇದೆಯೆಂದು ತಮ್ಮ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಎಂ. ವೀರಪ್ಪ ಮೋಯಿಲಿ.—ಫ್ಯಾಕ್ಟರಿ ನಡೆಯುತ್ತಿದೆಯೆಂದಂ ನಮ್ಮ ಗಮನಕ್ಕೆ ಬಂದಿಲ್ಲ. ನಾವು ಲೈಸೆನ್ಸ್ ಸಸ್‌ಪೆಂಡ್ ಮಾಡಿದ್ದೇವೆ. ಆದರ ಮೇಲೂ ಅವರು ನಡೆಸಿದರೆ ಅದು ಅಕ್ರಮ. ನೀವು ಗಮನಕ್ಕೆ ತಂದಿದ್ದೀರಿ. ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ಈಗಲೇ ಜಿಲ್ಲಾಧಿಕಾರಿಗಳಿಗೆ ಟೆಲಿಗ್ರಾಂ ಕೊಟ್ಟು ವಿಷಯ ತಿಳಿದು ಕೊಂಡು ಕೂಡಲೇ ನೋಟೀಸ್ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪಮೋಯಿಲಿ.—ಅದನ್ನು ಮಾಡುತ್ತೇವೆ.

ಒಬ್ಬ ಸದಸ್ಯರು.—ಡೆಪ್ಯೂಟಿ ಕಮೀಷನರಿಂದ ಮತ್ತು ಹೆಲ್ತ್ ಆಫೀಸರಿಂದ ರಿಪೋರ್ಟು ಬಂದಿದ್ದರೂ ರದ್ದು ಆಗಿದ್ದುದನ್ನು ಮತ್ತೆ ರಿನ್ಯೂ ಮಾಡಿದ್ದು ಏಕೆ ? ಅದು ಸರಿಯೇ ?

ಶ್ರೀ ಎಂ. ವೀರಪ್ಪ ಮೋಯಿಲಿ.—ಡೆಪ್ಯೂಟಿ ಕಮೀಷನರ ರಿಪೋರ್ಟು ಪ್ರಕಾರ ಕೆಟ್ಟ ವಾಸನೆ ಬರುತ್ತಾ ಇದೆ ಬಹಳ ಜನರಿಗೆ ಅನಾನುಕೂಲವಾಗುತ್ತಾ ಇದೆ ಎಂದು ರಿಪೋರ್ಟು ಕೊಟ್ಟಿದ್ದಾರೆ. ಆದರೆ ಖಂಡಸಾರಿ ಕಾರ್ಖಾನೆ ಅದರ ಪಲೂಷನ್ ಇಂದ ಜನರಿಗೆ ತೊಂದರೆಯಾಗುತ್ತದೆಯೋಎಂಬುದನ್ನು ತಿಳಿದು ಕೊಳ್ಳುವುದಕ್ಕೆ ಡಿಸಿ ಅವರು ಟೆಕ್ನಿಕಲ್ ಪರಸನ್ ಅಲ್ಲ. ಆದ್ದರಿಂದ ನಾವು ಅದನ್ನು ಟೆಕ್ನಿಕಲ್ ಎಕ್ಷಾಮಿನೇಷನ್‌ಗೆ ಕಳುಹಿಸಿ ಅವರ ಒಪಿನಿಯನ್ ಕೇಳಿದಾಗ ಅವರು ಒಪಿನಿಯನ್ ಕೊಟ್ಟರು. ಆದರ ಮೇಲೆ ರಿನ್ಯೂವಲ್ ಆರ್ಡರನ್ನು ಸಸ್‌ಪೆಂಡ್ ಮಾಡಿದೆವು. ಅದರ ಜೊತೆಗೆ ಒಪಿನಿಯನ್ ಬಂದದ್ದು ಳನೇ ಡಿಸೆಂಬರ್ ೧೯೭೫ರಲ್ಲಿ ಕೂಡಲೇ ಲೈಸನ್ಸ್ ಸಸ್‌ಪೆಂಡ್ ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ .—ಅದು ೧೯೫೯-೬೦ರಲ್ಲಿ ಸ್ಥಾಪನೆಯಾಗಿ ೧೫ ವರ್ಷಗಳಿಂದ ನಡೆದು ಕೊಂಡುಬಂದು ನಿಂತುಹೋಗಿತ್ತು. ಈಗ ೨ವರ್ಷಗಳಿಂದ ಮತ್ತೆ ಪ್ರಾರಂಭವಾಗಿದೆ, ಅದು ತಮ್ಮ ಗಮನಕ್ಕೆ ಬಂದಿದೆಯೇ ಸ್ವಾಮಿ ?

ಶ್ರೀ ಎಂ. ವೀರಪ್ಪ ಮೋಯಿಲಿ.—ನಮ್ಮ ಗಮನಕ್ಕೆ ಬಂದಿರುವ ರೀತಿ ೧೯೭೨ ರಿಂದ ಸರಾಗವಾಗಿ ನಡೆಯುತ್ತಿದೆಯೆಂದು ತಿಳಿದು ಬಂದಿದೆ.

ಸಹಕಾರ ಸಂಘಗಳಲ್ಲಿ ಹಣದ ದುರುಪಯೋಗ ಇತ್ಯಾದಿಗಳ ಬಗ್ಗೆ ತನಿಖೆ ನಡೆಸುವಲ್ಲಿ ವಿಳಂಬ ಮಾಡಿರುವುದು

೨೬೨. ಶ್ರೀ ಎನ್. ಬಸವಯ್ಯ(ಚಿಕ್ಕನಾಯಕನಹಳ್ಳಿ).—ಸಹಕಾರ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಸಹಕಾರ ಸಂಘಗಳಲ್ಲಿ ಹಣ ದುರುಪಯೋಗ, ದುರಾಡಳಿತ, ವಂಚನೆ, ಮುಂತಾದವುಗಳ ಬಗ್ಗೆ ವಿಚಾರಣೆಯು ಬಹಳ ವಿಳಂಬ ಗತಿಯಿಂದ ನಡೆಯುತ್ತಿದ್ದು ಸರಕಾರದ ಗಮನಕ್ಕೆ ಬಂದಿದೆಯೆ ;

(ಆ) ಈ ವಿಷಯದಲ್ಲಿ ತೀವ್ರಗತಿಯಿಂದ ಕಾರ್ಯ ನಿರ್ವಯಿಸಲು ಅನುಕೂಲವಾಗುವಂತೆ ಸರಕಾರವು ಜಿಲ್ಲೆಗೊಂದಂ ಆಥವಾ ಸಬ್ ಡಿವಿಜನ್‌ಗೆ ಒಂದರಂತೆ ಸಹಕಾರಿ ನ್ಯಾಯಾಲಯಗಳನ್ನು ಸ್ಥಾಪಿಸಲು ಉದ್ದೇಶಿಸಿದೆಯೆ ?

ಶ್ರೀ ಕೆ. ಎಚ್. ರಂಗನಾಥ್ (ಸಹಕಾರ ಶಾಖೆಯ ಮಂತ್ರಿಗಳು).—

(ಅ) ಕೆಲವು ಪ್ರಕರಣಗಳಲ್ಲಿ ಮಾತ್ರ ಗಮನಕ್ಕೆ ಬಂದಿದೆ.

(ಆ) ಇಲ್ಲಾ.

ಶ್ರೀ ಎನ್. ಬಸವಯ್ಯ.—೧೯೭೨, ೧೯೭೩, ೧೯೭೪, ೧೯೭೫, ರಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಸಹಕಾರಸಂಘಗಳು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿವೆ? ಒಟ್ಟು ಅಂದಾಜುಹಣವೆಷ್ಟು?

† ಶ್ರೀ ಕೆ. ಎಚ್. ರಂಗನಾಥ್.—ಅಧ್ಯಕ್ಷರೇ ೧೯೭೨ರ ವಿವರ ನನ್ನ ಹತ್ತಿರ ಇಲ್ಲ. ಜೊತೆಗೆ ಈ ಪ್ರಶ್ನೆಯಲ್ಲಿ ಅದು ಬರುವುದಿಲ್ಲ. ೧೯೭೩-೧೯೭೪, ೧೯೭೫ರಲ್ಲಿ ಈ ರೀತಿ ಇದೆ:—

Year	No. of cases	Under Investigation	Under trial	Disposed of	Convicted	Acquitted
1973	1123	272	292	554	162	177
1974	1293	330	368	595	173	186
1975	1150	229	371	550	171	51